Strength in the final year classes of High Schools in Mysore District.

Q.—357. **Sri H. K. SHIVARUDRAPPA** (Gundlupet - Heggaddevankote).—

Will the Government be pleased to state :—

(*a*) the number of High Schools in Mysore District at present;

(*b*) the total number of boys in the final year classes of these High Schools?

A.—**Sri A. G. RAMACHANDRA RAO** (Minister for Law and Education).—

(*a*) 31,

(*b*) 2,191.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಈಗ ತಾವು ನಮ್ಮ ಜಿಲ್ಲೆಗೆ ಕೊಟ್ಟಿರತಕ್ಕ ಇಂಟರ್ ಕಾಲೇಜುಗಳಲ್ಲಿ ಎಲ್ಲ ವಿದ್ಯಾರ್ಥಿಗಳಿಗೂ ಸೀಟನ್ನು ಕೊಡಲು ಅವಕಾಶವನ್ನುಂಟು ಮಾಡಿದ್ದೀರಾ?

ಶ್ರೀ ಎ. ಜಿ. ರಾಮಚಂದ್ರರಾಯರು.—ಎಲ್ಲರಿಗೂ ಸ್ಥಳಾವಕಾಶವಾಗಬಹುದೆಂದು ನನಗೆ ತಿಳಿದುಬಂದಿದೆ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಹಾಗೆ ಅನೇಕರಿಗೆ ಇಂಟರ್ ಕಾಲೇಜುಗಳಲ್ಲಿ ಸೀಟ್ ದೊರೆಯದೆ ಅವರು ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಿಲ್ಲದೆ ನಿಲ್ಲಿಸಿರತಕ್ಕ ವಿಚಾರ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇಲ್ಲ. ಸಾಕಾಗುವಷ್ಟು ಸೀಟ್ಸ್‌ನ್ನು ಪ್ರೊವೈಡ್ ಮಾಡಿದ್ದೇವೆ.

ಶ್ರೀ ಎಚ್. ಕೆ. ಶಿವರುದ್ರಪ್ಪನವರು.—ಇಂಟರ್ ಕಾಲೇಜಿಗೆ ವಿದ್ಯಾಭ್ಯಾಸಕ್ಕಾಗಿ ಬರತಕ್ಕ ವಿದಾರ್ಥಿಗಳ ಸೌಕರ್ಯಕ್ಕಾಗಿ ಇನ್ನೊಂದು ಇಂಟರ್ ಕಾಲೇಜನ್ನು ಅಲ್ಲಗೆ ಕೊಡರಾಗುತ್ತದೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಅದು ಸಾಧ್ಯವಿಲ್ಲ. ಇರತಕ್ಕ ಕಾಲೇಜುಗಳಲ್ಲೇ ಹೆಚ್ಚು ಸ್ಥಳಾವಕಾಶ ಕಲ್ಪಿಸುವಂತೆ ಮಾಡಿದ್ದೇವೆ.

Uniform Grades of Pay in respect of all High Schools.

Q.—395. **Sri K. PANCHAKSHARIAH** (Arsikere).—

Will the Government be pleased to state.—

(*a*) whether there is any difference in the scales of pay and grades of the teachers in Government, Municipal and District Board High Schools in the State;

(*b*) whether as a result of this difference it has not become difficult to secure the services of efficient teachers for the High Schools run by local bodies;

(*c*) whether they have thought of introducing uniform scales of pay, grades, etc. in respect of all High Schools?

A.—**Sri A. G. RAMACHANDRA RAO** (Minister for Law and Education).—

(*a*) Yes.

(*b*) No.

(*c*) No.

ಶ್ರೀ ಕೆ. ಪಂಚಾಕ್ಷರಯ್ಯನವರು.—(ಎ) ಪ್ರಶ್ನೆಗೆ ಒದಗಿಸಿರುವ ಉತ್ತರದಲ್ಲಿ 'ಇದೆ' ಎಂದು ಹೇಳಿದ್ದೀರಿ. ಈ ಪಕ್ಷಪಾತಕ್ಕೆ ಕಾರಣವೇನು ಸ್ವಾಮಿ!

ಅಧ್ಯಕ್ಷರು.—ಅದನ್ನು ಪಕ್ಷಪಾತವೆಂದು ತಾವು ಹೇಳಬಾರದು.

ಶ್ರೀ ಕೆ. ಪಂಚಾಕ್ಷರಯ್ಯನವರು.—ಅಗಲ ಸ್ವಾಮಿ, ಈ ವ್ಯತ್ಯಾಸಕ್ಕೆ ಏನು ಕಾರಣ!

ಶ್ರೀ ಎ. ಜಿ. ರಾಮಚಂದ್ರರಾಯರು.—ಮುನಿಸಿಪಾಲಿಟಿಗೆ ಎಷ್ಟು ಶಕ್ತಿ ಇದೆಯೋ ಮತ್ತೂ ಅದಕ್ಕೆ ಎಷ್ಟೆಷ್ಟರ ಮಟ್ಟಿಗೆ ಉತ್ಪತ್ತಿ ಮಾರ್ಗಗಳಿರುತ್ತವೆಯೋ ಅವಕ್ಕೆ ಅನುಸಾರವಾಗಿ ಅವರು ವೇತನ ಕೊಡುತ್ತಾರೆ ಅಷ್ಟೆ.

ಶ್ರೀ ಕೆ. ಪಂಚಾಕ್ಷರಯ್ಯನವರು.—ಹೀಗೊಂದು ವ್ಯತ್ಯಾಸವಿರುವುದರಿಂದ ಅನುಭವಶಾಲಿಗಳೂ ಮತ್ತು ದಕ್ಷರೂ ಆದ ಉಪಾಧ್ಯಾಯರು ಆ ಶಾಲೆಗಳಿಗೆ ಬರುತ್ತಿಲ್ಲವೆಂಬ ಅಂಶ ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ನಮ್ಮ ಗಮನಕ್ಕೆ ಬಂದಿಲ್ಲ.

ಶ್ರೀ ಕೆ. ಪಂಚಾಕ್ಷರಯ್ಯನವರು.—ಇದರಿಂದ ಆ ಸ್ಥಳದಲ್ಲಿ ಜನರಿಗೆ ವಿದ್ಯಾಭ್ಯಾಸ ಮಾಡಲು ಬಹಳ ತೊಂದರೆಯಾಗಿದೆಯೆಂಬ ಅಂಶವಾದರೂ ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಇಲ್ಲ.

ಶ್ರೀ ಪಿ. ಆರ್. ರಾಮಯ್ಯನವರು (ಬಸವನಗುಡಿ).—ಹೀಗಿರುವ ವ್ಯತ್ಯಾಸವನ್ನು ತಪ್ಪಿಸಬೇಕೆಂದು ತಮಗೆ ಆ ಸಂಸ್ಥೆಗಳೇನಾದರೂ ಅರ್ಜಿ ಹಾಕಿಕೊಂಡಿವೆಯೇ!

ಶ್ರೀ ಎ. ಜಿ. ರಾಮಚಂದ್ರರಾಯರು.—ಒಂದೆರಡು ಬಂದಿರುವ ಹಾಗೆ ಕಾಣುತ್ತದೆ.

ಶ್ರೀ ಸೋಲೂರು ಸಿದ್ದಪ್ಪನವರು (ಮಾಗಡಿ).—ಸರ್ಕಾರಿ ಪಾಠಶಾಲೆಗಳಲ್ಲಿ ಕೆಲಸ ಮಾಡತಕ್ಕ ನೌಕರರಿಗೆ ಸಂಬಳ ಕೊಡುವಂತೆ ಅವರಿಗೂ ಕೊಡಬೇಕೆಂದು ಹಲವರು ಅರ್ಜಿ ಹಾಕಿಕೊಂಡಿಲ್ಲವೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಕೆಲವರು ಮಾತ್ರ; ಹಲವರಲ್ಲ.

ಶ್ರೀ ಎಸ್. ಸಿದ್ದಪ್ಪನವರು.—ಸರ್ಕಾರದವರು ಇದನ್ನು ಕನಿಕರದಿಂದ ಪರಿಶೀಲಿಸುವರೇ?

ಶ್ರೀ ಎ. ಜಿ. ರಾಮಚಂದ್ರರಾಯರು.—ಆ ಜವಾಬ್ದಾರಿಯೆಲ್ಲಾ ಆಯಾಯ ಸ್ಥಳೀಯ ಸಂಸ್ಥೆಗಳಗೇ ಸೇರಿರುತ್ತದೆ. ಸರ್ಕಾರದವರ ಜವಾಬ್ದಾರಿಯೇನೂ ಅದರ ಮೇಲೆ ಇರುವುದಿಲ್ಲ.